**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಸವಣೂರ**

**ಸಿ.ಸಿ. ಸಂಖ್ಯೆ : 1474/2025**

ಫಿರ್ಯಾದಿ : ಶ್ರೀ ರವಿಕುಮಾರ ತಂದೆ ಶಂಕ್ರಪ್ಪ ಚಬ್ಬಿ

**ವಿರುದ್ಧ**

ಆರೋಪಿ : ಸಂಗೀತಾ ಕೋಂ. ಸಂತೋಷ ಕೊಳ್ಳಿ

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ಅಡಿ ಆರೋಪಿತಳ ಹೇಳಿಕೆ**

**ಪ್ರಶ್ನೆ- 1 :** ನೀವು ಈ ಪ್ರಕರಣದ ಫಿರ್ಯಾದಿ ನುಡಿದ ಸಾಕ್ಷ್ಯವನ್ನು ಕೇಳಿದ್ದೀಯಾ?

**ಉತ್ತರ :**

**ಪ್ರಶ್ನೆ-2 :** ಫಿರ್ಯಾದಿರವರು ತಮ್ಮ ಸಾಕ್ಷ್ಯದಲ್ಲಿ ನೀವು ಆರೋಪಿತರಾದ ನೀವು ನಿಮ್ಮ ಗೃಹಕೃತ್ಯದ ಸಲುವಾಗಿ ಫಿರ್ಯಾದಿ ಹತ್ತಿರ ಕೈಗಡ ಸಾಲ ರೂ.2,00,000/- ಪಡೆದುಕೊಂಡಿರುತ್ತೀರಿ ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುವಿರಿ?

**ಉತ್ತರ :**

**ಪ್ರಶ್ನೆ-3 :** ಮುಂದುವರೆದು, ಸದರಿ ಹಣವನ್ನು ಫಿರ್ಯಾದುದಾರರು ಮರಳಿಕೊಡುವಂತೆ ನಿಮನ್ನು ಕೇಳಿದಾಗ, ಸದರಿ ಹಣವನ್ನು ಹಿಂದಿರುಗಿಸುವ ಸಲುವಾಗಿ ನೀವು ನಿಮ್ಮ ಖಾತೆಯುಳ್ಳ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್, ಯಲವಿಗಿ ಶಾಖೆಯ ಚೆಕ್ ನಂ.20437 ಅನ್ನು ದಿನಾಂಕ 03-08-2025 ರಂದು ಚೆಕ್ಕನ್ನು ಹಾಜರಪಡಿಸಿ ಸದರಿ ಚೆಕ್ಕಿನಲ್ಲಿ ರೂ.2,00,000/- ಗಳನ್ನು ಪಡೆದುಕೊಳ್ಳಲು ಫಿರ್ಯಾದಿದಾರರಿಗೆ ಕೊಟ್ಟಿರುತ್ತೀರಿ ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುವಿರಿ?

**ಉತ್ತರಃ**

**ಪ್ರಶ್ನೆ-4 :** ಮುಂದುವರೆದು ಫಿರ್ಯಾದುದಾರರು ತಾವು ಖಾತೆ ಹೊಂದಿರುವ 'ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್, ಯಲವಿಗಿ ಶಾಖೆ ಇವರಲ್ಲಿ ಸದರಿ ಚೆಕ್‌ನ್ನು ನಗಧಿಕರಿಸಲು ಹಾಕಿದ್ದು, ಸದರಿ ಬ್ಯಾಂಕಿನವರು "Funds insufficient" ಅಂತ ಸದರಿ ಚೆಕ್ಕನ್ನು ದಿನಾಂಕ 01-09-2025 ರಂದು ಬ್ಯಾಂಕಿನ ಮೆಮೊ ಲಗತ್ತಿಸಿ ಹಿಂದಿರುಗಿಸಿರುತ್ತಾರೆ ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುವಿರಿ?

**ಉತ್ತರಃ**

**ಪ್ರಶ್ನೆ-5 :** ಮುಂದುವರೆದು ಫಿರ್ಯಾದುದಾರರು ದಿನಾಂಕ : 10-09-2025 ರಂದು ತಮ್ಮ ವಕೀಲರ ಮುಖಾಂತರ ಕಾನೂನು ರೀತ್ಯಾ ನೋಟಿಸನ್ನು ನಿಮ್ಮ ವಿಳಾಸಕ್ಕೆ ಸ್ವೀಕೃತ ಅಂಚೆ ಮುಖಾಂತರ ನೀಡಿದ್ದು ಇರುತ್ತದೆ ಎಂದು ಮತ್ತು ಸದರಿ ನೋಟಿಸು ದಿ : 20-09-2025 ರಂದು ಆರೋಪಿತರಾದ ನೀವು ಖುದ್ದಾಗಿ ಸ್ವೀಕರಿಸಿದ್ದು ಇರುತ್ತದೆ ಹಾಗೂ ನೋಟಿಸ್ ಗೆ ಯಾವುದೇ ಉತ್ತರವನ್ನು ಕೊಟ್ಟಿರುವುದಿಲ್ಲ ಮತ್ತು ಚೆಕ್ ಹಣವನ್ನು ಈವರೆಗೂ ಫಿರ್ಯಾದಿದಾರರಿಗೆ ಕೊಟ್ಟಿರುವುದಿಲ್ಲ. ನೀವು ಫಿರ್ಯಾದುದಾರರಿಗೆ ಕೊಡಬೇಕಾದ ಸದರಿ ಹಣವನ್ನು ಕೊಡದೇ ಮೋಸ ಹಾಗೂ ವಂಚನೆ ಮಾಡುವ ದುರುದ್ದೇಶದಿಂದ ಖೊಟ್ಟಿ ಚೆಕ್ಕನ್ನು ನೀಡಿ ಆ ಮೂಲಕ ನೀವು ವರ್ಗಾವಣೆಯ ಲಿಖಿತಗಳ ಅಧಿನಿಯಮ ಕಲಂ-138 ಅಡಿಯಲ್ಲಿ ಅಪರಾಧ ಮಾಡಿರುತ್ತೀರಿ ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುವಿರಿ?

**ಉತ್ತರಃ**

**ಪ್ರಶ್ನೆಃ 6** ನೀವು ಮತ್ತೇನಾದರೂ ಹೇಳುವುದು ಅಥವಾ ದಾಖಲೆ ಸಲ್ಲಿಸುವುದು ಇದೆಯಾ?

**ಉತ್ತರಃ**

**ಪ್ರಶ್ನೆ-7 :** ನಿಮ್ಮ ಪರ ಸಾಕ್ಷಿ ವಿಚಾರಣೆ ಮಾಡಿಸುವಿರಾ?

**ಉತ್ತರಃ**

(ಈ ಮೇಲಿನ ಪ್ರಶ್ನೆಗಳನ್ನು ಆರೋಪಿಗೆ ತಿಳಿಯುವ ಭಾಷ್ಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ, ಹೇಳಿ ಆರೋಪಿತಳು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಂಡಿದೆ ಎಂದು ಪ್ರಮಾಣಿಕರಿಸುತ್ತೇನೆ)

**(ಶ್ರೀನಿವಾಸ. ಎಸ್.ಎನ್)**
**ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ.ಗಳು ಸವಣೂರ.**

ದಿನಾಂಕ : 27-11-2025

ಆರೋಪಿತಳ ಸಹಿ: